ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತನಿಖಾ ತಂಡಕ್ಕೆ ಪದಕ

ನಮ್ಮ ಮಧ್ಯೆಯೇ ಇರುವ ಪ್ರಾಮಾಣಿಕ, ನಿಷ್ಠಾವಂತ, ದಕ್ಷ ಅಧಿಕಾರಿಗಳು ಎಲೆ ಮರೆಕಾಯಿಯಂತಿರುತ್ತಾರೆ. ಕೆಲ ಬಾರಿ ಅವರು ಆಟಕ್ಕುಂಟು, ಲೆಕ್ಕಕ್ಕಿಲ್ಲದಂತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಗೌರಿ ಹತ್ಯೆ ಪ್ರಕರಣವನ್ನು ಭೇದಿಸುವುದು ಪೊಲೀಸ್ ಇಲಾಖೆಗೆ ದೊಡ್ಡ ಸವಾಲಿನಂತಾಗಿತ್ತು. ಆದರೆ ಪ್ರಕರಣದ ವಿಭಿನ್ನ ಆಯಾಮಗಳ ವಿಚಾರಣೆ ನಡೆಸಿ ಈ ಪ್ರಕರಣದ ಜಾಡು ಹಿಡಿದು ಹೊರಟಿದ್ದ ಎಂ.ಎನ್. ಅನುಚೇತ್ ನೇತೃತ್ವದ ತಂಡ ತ್ವರಿತ ಗತಿಯಲ್ಲಿ, ಸೀಮಿತ ಅವಧಿಯೊಳಗೆ ಗೌರಿ ಹತ್ಯೆ ಪ್ರಕರಣವನ್ನು ಭೇದಿಸಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಉತ್ತಮ ತನಿಖೆಗಾಗಿ ಕರ್ನಾಟಕದ ಐಪಿಎಸ್ ಅಧಿಕಾರಿ ಎಂ.ಎನ್. ಅನುಚೇತ್ ಮತ್ತು ತಂಡದ ಒಟ್ಟು ಆರು ಮಂದಿಗೆ ಪ್ರತಿಷ್ಠಿತ ಕೇಂದ್ರ ಗೃಹ ಮಂತ್ರಿ ಪದಕ ಘೋಷಿಸಿ ಗೌರವ ಸಲ್ಲಿಸಲು ನಿರ್ಧರಿಸಿದ್ದು ಸ್ವಾಗತಾರ್ಹ. ಇದನ್ನರಿತು ರಾಜ್ಯ ಹಾಗೂ ಕೇಂದ್ರ ಸರಕಾರ ಕರ್ನಾಟಕದಲ್ಲಿ ನಮ್ಮ ಕರ್ನಾಟಕದಲ್ಲಿ ದಶಕಗಳಿಂದ ಭೇದಿಸಲಾಗದೆ ನನೆಗುದಿಗೆ ಬಿದ್ದಿರುವ ಅದೆಷ್ಟೋ ಪ್ರಕರಣಗಳನ್ನು ಸಹ ಇಂತಹ ವಿಶೇಷ ತನಿಖಾ ತಂಡಗಳಿಗೆ ಹಸ್ತಾಂತರಿಸಿದರೆ ಶೀಘ್ರವೇ ಬಗೆಹರಿಸಲಾಗದ ಪ್ರಕರಣಗಳಲ್ಲಿ ಅಡಗಿರುವ ಪ್ರಭಾವಿ ಕಾಣದ ಕೈಗಳಿಗೆ ಕೋಳ ಬೀಳುವುದರಲ್ಲಿ ಸಂದೇಹವೇ ಇಲ್ಲ.

– ಪರಮೇಶ್ವರ.ಬಿ.ಬಿರಾದಾರ, ಬೀದರ

ರಾಜ್ಯ-ಕೇಂದ್ರ ತಾರತಮ್ಯ!

ಕೃಷ್ಣ, ತುಂಗಭದ್ರಾ ನದಿಗಳಿಂದ ಉಂಟಾದ ಪ್ರವಾಹದಿಂದಾಗಿ ರಾಯಚೂರು ಜಿಲ್ಲೆಯ ನಾನಾ ಪ್ರದೇಶಗಳಲ್ಲಿ ಉಂಟಾದ ನಷ್ಟ ಪರಿಹಾರಕ್ಕೆ ರಾಜ್ಯ ಹಾಗೂ ಕೇಂದ್ರ ಬಿಜೆಪಿ ಸರಕಾರ 1000 ಕೋಟಿ ರು. ಹಣ ಬಿಡುಗಡೆ ಮಾಡಬೇಕು. ಎರಡು ನದಿಗಳ ಪ್ರವಾಹದಿಂದಾಗಿ ಜಿಲ್ಲೆಯ ಲಿಂಗಸುಗೂರು, ದೇವದುರ್ಗ, ರಾಯಚೂರು ಗ್ರಾಮೀಣ ಹಾಗೂ ಮಾನ್ವಿ ಕ್ಷೇತ್ರಗಳಲ್ಲಿ ಅಪಾರ ಪ್ರಮಾಣದಲ್ಲಿ ಆಸ್ತಿಪಾಸ್ತಿ, ಬೆಳೆ ನಷ್ಟವುಂಟಾಗಿದೆ. ಆದರೆ ಸರಕಾರ ಪರಿಹಾರ ಹಣ ಬಿಡುಗಡೆ ಮಾಡದೇ ಜಿಲ್ಲೆಯನ್ನು ಸಂಪೂರ್ಣ ನಿರ್ಲಕ್ಷಿಸಿ ತಾರತಮ್ಯ ಮಾಡಲಾಗಿದೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಸಚಿವರು, ಮಂತ್ರಿ ಮಂಡಲ ಇಲ್ಲದೇ ಬರೀ ಮುಖ್ಯಮಂತ್ರಿಯವರ ಮೇಲೆ ಜವಾಬ್ದಾರಿ ಇದೆ. ಇದರಿಂದ ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಹಲವೆಡೆ ಉಂಟಾಗಿರುವ ಅತಿ ವೃಷ್ಟಿಯಿಂದಾಗಿ ನಷ್ಟಕ್ಕೊಳಗಾಗಿರುವ ಜನರಿಗೆ ಸೂಕ್ತ ರೀತಿಯಲ್ಲಿ ಪರಿಹಾರ ಸೌಲಭ್ಯ ಕಲ್ಪಿಸಲು ಸರಕಾರದಿಂದ ಸಾಧ್ಯವಾಗಬೇಕು.

– ವಿಜಯಕುಮಾರ್ ಎಚ್.ಕೆ. ಶಕ್ತಿನಗರ

ಬೇರೆಯದೇ ಕಾರಣ

ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಪ್ರಧಾನ ಮಂತ್ರಿ ಜನೌಷಧ ಕೇಂದ್ರಗಳು ಮುಚ್ಚಲ್ಪಡುತ್ತಿವೆ ಎಂಬ ಬಗ್ಗೆ ಒಂದು ವರದಿ ಪ್ರಕಟವಾಗುತ್ತು. ಈ ರೀತಿ ಮುಚ್ಚಲ್ಪಡುವುದಕ್ಕೆ ಕಾರಣಗಳನ್ನು ಪಟ್ಟಿ ಮಾಡುತ್ತಾ ಅರ್ಹ ಫಾರ್ಮಾಸಿಸ್ಟರ ಪದವಿ ಪ್ರಮಾಣ ಪತ್ರ ಪಡೆದು ನೋಂದಣಿ ಮಾಡಿ ಇಂತಹ ಜನೌಷಧ ಕೇಂದ್ರಗಳನ್ನು ಆರಂಭಿಸಲಾಗಿದೆ ಹಾಗೂ ಅವರಿಗೆ ತಿಂಗಳಿಗೊಮ್ಮೆ ಹಣ ಪಾವತಿ ಮಾಡಬೇಕಾಗಿದೆ ಎಂದು ವರದಿಯಾಗಿದೆ. ಈ ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮೇಲಿನ ವರದಿ ಒಂದು ನಗ್ನ ಸತ್ಯವನ್ನು ಬಿಚ್ಚಿಟ್ಟಿದೆ. ಅದೇನೆಂದರೆ ಬಹುತೇಕ ಫಾರ್ಮಸಿಗಳನ್ನು ನಡೆಸುವವರು ಅರ್ಹತೆ ಪಡೆದ ಫಾರ್ಮಾಸಿಸ್ಟರಲ್ಲ. ಇದು ಕಾನೂನಿಗೆ ವಿರುದ್ಧ. ಪ್ರಧಾನಮಂತ್ರಿ ಜನೌಷಧ ಕೇಂದ್ರ ಸ್ಥಾಪನೆಯ ಹಿಂದೆ ಜನರಿಗೆ ಕಡಿಮೆ ಬೆಲೆಯಲ್ಲಿ ಔಷಧ ದೊರೆಯುವಂತೆ ಆಗಬೇಕೆಂಬುದರ ಜತೆಗೆ ಫಾರ್ಮಸಿ ಪದವಿ ಮುಗಿಸಿದ ಅರ್ಹರಿಗೆ ಸ್ವಯಂ ಉದ್ಯೋಗಕ್ಕೆ ಅವಕಾಶ ಸಿಗಬೇಕೆಂಬುದು ಕೂಡಾ ಒಂದು. ಅದಕ್ಕಾಗಿಯೇ ಈ ಯೋಜನೆಯಡಿ ಆರ್ಥಿಕ ಸಹಕಾರದಂತಹ ಹಲವಾರು ಪ್ರೋತ್ಸಾಹದಾಯಕ ಕ್ರಮಗಳನ್ನು ಅಳವಡಿಸಿರುವುದಾಗಿದೆ. ಆದರೆ ಪ್ರಮಾಣ ಪತ್ರವನ್ನು ಯಾರಿಗೋ ಕೊಟ್ಟು ತಿಂಗಳಿಗಿಷ್ಟು ಜೇಬಿಗಿಳಿಸುವುದರ ಜತೆಗೆ ಅರ್ಹತೆ ಇಲ್ಲದವರು ಔಷಧ ವಿತರಿಸಿ, ರೋಗಿಗಳ ಜೀವದೊಡನೆ ಚೆಲ್ಲಾಟವಾಡುವಂತಾಗಬಾರದು.

–ಮೋಹನದಾಸ ಕಿಣಿ, ಕಾಪು

ಭಟ್ಟರ್ ಸ್ನ್ಯಾಕ್

- **ಜಿ.ಜಿ.ಆಳ್ವ,** ಕೆಂಗೇರಿ
  ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಸೋನಿಯಾ ಗಾಂಧಿ ಅವರನ್ನೇ ಅಧ್ಯಕ್ಷೆಯನ್ನಾಗಿ ಮಾಡಿದ್ದೇಕೆ?
  – ಹಾಗಲ್ಲ, ಸೋನಿಯಾ ಗಾಂಧಿ ಅವರೇ ಸೋನಿಯಾ ಗಾಂಧಿ ಅವರನ್ನು ಅಧ್ಯಕ್ಷೆಯನ್ನಾಗಿ ಮಾಡಿದ್ದೇಕೆ ಎಂದು ಕೇಳಿ!
- **ಗಿರೀಶ ರಾಜು ಕೆ.,** ಬಾಣಸವಾಡಿ
  ಕನ್ನಡ ಚಿತ್ರರಂಗಕ್ಕೆ ಹನ್ನೊಂದು ಪ್ರಶಸ್ತಿ ಬಂದಿದೆಯಂತಲ್ಲ?
  – ಕನ್ನಡ ಚಿತ್ರರಂಗದ ಸಮಸ್ಯೆ ಪ್ರೇಕ್ಷಕರದ್ದು. ಥಿಯೇಟರಿಗೆ ಬರೋದೇ ಇಲ್ಲ!
- **ಸತೀಶ ಹೆಗಡೆ,** ಬಾರಕೂರು
  ಕರವೇ ಅಧ್ಯಕ್ಷ ನಾರಾಯಣ ಗೌಡರಿಗೆ ಪದ್ಮಶ್ರೀ ಕೊಡಬೇಕೆಂದು ಹೋರಾಟ ಮಾಡಬೇಕೆಂದಿರುವೆ, ಬೆಂಬಲಿಸುತ್ತೀರಾ?
  – ನೀವು ಹೋರಾಟ ಮಾಡೋದಾದ್ರೆ, ರೆಡಿ!
- **ಕೆಂಪಯ್ಯ ಜೇನುಕಲ್ಲು,** ಮದ್ದೂರು
  ನನ್ನ ಪತ್ನಿ ಮೇಕಪ್ ಮಾಡಿಕೊಳ್ಳಲು ಅರ್ಧ ಗಂಟೆ ತಗೋತಾಳೆ ಆದ್ರೂ ಯಾರೂ ನೋಡುವುದಿಲ್ಲವಲ್ಲ?
  – ಮೇಕಪ್ ಮಾಡಿಕೊಳ್ಳದಿದ್ದರೆ ನೀವೂ ನೋಡೋಲ್ಲ!
- **ಗಂಗಣ್ಣ ಕೆ.ಹಾದಿ,** ಚಾಮರಾಜಪೇಟೆ
  ಯಡಿಯೂರಪ್ಪ ಅವರಲ್ಲಿ ಯಾವುದು ಕಮ್ಮಿಯಾಗಿದೆ, ಯಾವುದು ಜಾಸ್ತಿಯಾಗಿದೆ?
  – ಸಿಟ್ಟು ಕಮ್ಮಿಯಾಗಿದೆ, ವಯಸ್ಸು ಜಾಸ್ತಿಯಾಗಿದೆ!
- **ಸುರೇಶ ಗಾಣಿಗ ,** ಜೆ.ಪಿ.ನಗರ
  ಕೆಂಡದಂಥ ಕೋಪ ಅಂತಾರಲ್ಲ ಯಾಕೆ?
  – ಇಲ್ಲೂ ಹೆಂಡತಿಯ ಹೋಲಿಕೆ ಬೇಡ ಅಂತ ರಿಯಾಯತಿ ಕೊಟ್ಟಿರಬೇಕು!

ಕಣಿವೆಯಲ್ಲಿ ಕಾದಿದೆ, ಸ್ಥಳೀಯರನ್ನು ಒಲಿಸಿಕೊಳ್ಳುವ ಸವಾಲು!

ಇನ್ನೊಂದು ಮುಖ

ಶಶಿಧರ ಹಾಲಾಡಿ

vveditoped@gmail.com

ಸುಮಾರು ಏಳು ದಶಕಗಳ ನಂತರ, ನಮ್ಮ ದೇಶದಲ್ಲಿ ಹಿಂದೆ ಘಟಿಸಿದ್ದ ಒಂದು ಪ್ರಮಾದವನ್ನು ಸರಿಪಡಿಸಲಾಗಿದೆ. ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಪಡಿಸಿ, ಭಾರತದ ಇತರ ರಾಜ್ಯಗಳಂತೆ ಅದೂ ಒಂದು ಎಂದು ಪರಿಗಣಿಸುವ ಮೂಲಕ, ಕೇಂದ್ರ ಸರಕಾರ ಒಂದು ಐತಿಹಾಸಿಕ ಹೆಜ್ಜೆಯನ್ನಿಟ್ಟಿದೆ. ಕೆಲವೇ ತಿಂಗಳುಗಳ ಹಿಂದೆಯೂ, ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸುವ ಸಾಧ್ಯತೆಯನ್ನು ಕನಸಿನಲ್ಲೂ ಜನಸಾಮಾನ್ಯರು ಊಹಿಸಿರಲಿಕ್ಕಿಲ್ಲ. ಚುನಾವಣಾ ಪ್ರಚಾರದ ಭಾಗವಾದ ಪ್ರಣಾಳಿಕೆಯಲ್ಲಿ, ತಾವು ಅಧಿಕಾರಕ್ಕೆ ಬಂದರೆ ಇಂತಹ ವಿವಾದಾತ್ಮಕ ಮತ್ತು ಬೃಹತ್ ಪ್ರಮಾಣದಲ್ಲಿ ದುರುಪಯೋಗಗೊಂಡಿರುವ ವಿಧಿಯನ್ನು ರದ್ದುಪಡಿಸುವುದಾಗಿ ಬಿಜೆಪಿ ಹೇಳಿಕೊಂಡಿದ್ದು ನಿಜ. ನಮ್ಮ ದೇಶದಲ್ಲಿ ಅದೆಷ್ಟೋ ಚುನಾವಣಾ ಪ್ರಣಾಳಿಕೆಗಳು ಹೇಳಿಕೆಯ ಮಟ್ಟದಲ್ಲೇ ಉಳಿದಿದ್ದನ್ನು ಕಂಡಿರುವ ಜನಸಾಮಾನ್ಯರು, ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನವನ್ನು ಬಿಜೆಪಿಯವರು ರದ್ದು ಪಡಿಸುವಂತಹ ಕ್ರಮವನ್ನು ತೆಗೆದುಕೊಂಡಾರು ಎಂದು ಖಂಡಿತವಾಗಿಯೂ ನಿರೀಕ್ಷಿಸಿರಲಿಲ್ಲ.

ಹಾಗೆ ನೋಡಹೋದರೆ, ವಿಶೇಷ ಸ್ಥಾನಮಾನ ಪಡೆದಿರುವ ರಾಜ್ಯಗಳು ನಮ್ಮ ದೇಶದಲ್ಲಿ ಇನ್ನೂ ಕೆಲವು ಅಲ್ಲಲ್ಲಿ ಇವೆ. ನಾಗಾಲೆಂಡ್, ತ್ರಿಪುರಾ, ಮೇಘಾಲಯ ಮೊದಲಾದ ರಾಜ್ಯಗಳಲ್ಲೂ, ಸ್ಥಳೀಯ ಭೌಗೋಳಿಕ ಹಿನ್ನೆಲೆ, ಜನಗುಂಪು, ಧರ್ಮ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಆಯಾ ರಾಜ್ಯಗಳಿಗೆ ವಿಶೇಷ ಅಧಿಕಾರವನ್ನು ನೀಡಲಾಗಿದೆ. ಆದರೆ, ಅವ್ಯಾವವೂ ಕಾಶ್ಮೀರಕ್ಕಿದ್ದ ವಿಶೇಷಾಧಿಕಾರದಂತೆ ವಿವಾದಕ್ಕೆ ಒಳಗಾಗಲಿಲ್ಲ. ಇದಕ್ಕೆ ಹಲವು ಕಾರಣಗಳಿವೆ.

ನಮ್ಮ ದೇಶವು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವು ಆರಂಭದಿಂದಲೂ ವಿವಾದಿತ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಅದನ್ನು ಸ್ಪಷ್ಟಮಾತುಗಳಲ್ಲಿ ವಿರೋಧಿಸಿದ್ದರು, ಇದರಿಂದ ಮುಂದೆ ತೊಂದರೆ ಉಂಟಾಗಲಿದೆ ಎಂದು ಊಹಿಸಿದ್ದರು. ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ, ಅಲ್ಲಿನ ರಾಜ ಹರಿಸಿಂಗ್ ಮೊದಲಿಗೆ ತಟಸ್ಥನಾಗಿ ಉಳಿಯಲು ಬಯಸಿದ್ದ – ಅದಕ್ಕೆ ಮುಖ್ಯ ಕಾರಣ, ಅಂದಿನ ವೈಸ್‌ರಾಯ್ ಮೌಂಟ್ ಬ್ಯಾಟನ್. ಕಾಶ್ಮೀರವು ತಟಸ್ಥ ದೇಶವಾಗಿ ಉಳಿದು, ಸ್ವಿಟ್ಜರ್ಲೆಂಡ್ ಮಾದರಿಯಲ್ಲಿ ಅಲಿಪ್ತ ಮತ್ತು ಶ್ರೀಮಂತ ರಾಷ್ಟ್ರವಾಗಿ ರೂಪುಗೊಳ್ಳಲಿ ಎಂದು ಮೌಂಟ್‌ಬ್ಯಾಟನ್ ನಿಡಿದ ಸಲಹೆಯನ್ನು ಮಹಾರಾಜ ಹರಿಸಿಂಗ್ ಒಪ್ಪಿದ್ದ. ಇನ್ನೂ ಆಳವಾಗಿ ನೋಡಲು ಹೋದರೆ, ಬ್ರಿಟಿಷರು ಭಾರತದ ಸಮಗ್ರತೆಗೆ ಧಕ್ಕೆ ತರಲು ಮಾಡಿದ ಬೃಹತ್ ಕುತಂತ್ರದ ಒಂದು ಹೆಜ್ಜೆ ಇದು. 1947ರಲ್ಲಿ ಸ್ವತಂತ್ರ ಭಾರತದ ಜತೆಯಲ್ಲೇ, ಪೂರ್ವ ಪಾಕಿಸ್ತಾನ, ಪಶ್ಚಿಮ ಪಾಕಿಸ್ತಾನ ರೂಪುಗೊಂಡಂತೆ, ದಕ್ಷಿಣ ಪಾಕಿಸ್ತಾನ (ನಿಜಾಮನ ಹೈದರಾಬಾದ್), ಮಧ್ಯ ಪಾಕಿಸ್ತಾನ, ಉತ್ತರ ಪಾಕಿಸ್ತಾನಗಳಂತಹ ಭಾಗಗಳನ್ನು ಸೃಷ್ಟಿಸಿ, ಭಾರತದ ಭವಿಷ್ಯದ ಬೆಳವಣಿಗೆಗೆ ತೊಡರನ್ನು ಸೃಷ್ಟಿಸುವುದು ಬ್ರಿಟಿಷರ ಯೋಜನೆಯಾಗಿತ್ತು. ಆದರೆ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ದೂರದರ್ಶಿತ್ವ, ಮುತ್ಸದ್ದಿತನ ಮತ್ತು ಬಿಗಿಯಾದ ನಡೆಯಿಂದಾಗಿ, ಹೈದರಾಬಾದ್, ಜುನಾಗಡ್ ಸೇರಿದಂತೆ 520ಕ್ಕೂ ಹೆಚ್ಚು ರಾಜಸಂಸ್ಥಾನಗಳು 1947ರ ಆಗಸ್ಟ್ 15ರಂದು ವಿಲೀನಗೊಂಡವು.

ಆದರೆ ಕಾಶ್ಮೀರದ ವಿಷಯದಲ್ಲಿ ಸರ್ದಾರ್ ಪಟೇಲ್ ಅವರ ಉಕ್ಕಿನ ಹಸ್ತ ಕೆಲಸ ಮಾಡಲು ಅವಕಾಶವಾಗಲಿಲ್ಲ. ಪ್ರಧಾನಿ ನೆಹರೂ ಅವರ ಹಸ್ತಕ್ಷೇಪವೇ ಸಾಕಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿತು. ಕಾಶ್ಮೀರದ ರಾಜ ಹರಿಸಿಂಗ್ ಭಾರತದೊಂದಿಗೆ ವಿಲೀನವಾಗಲು ಒಪ್ಪಿಕೊಂಡರೂ, ಆ ಹೊಸ ರಾಜ್ಯದ 'ಪ್ರಧಾನ ಮಂತ್ರಿ' ಶೇಖ್ ಅಬ್ದುಲ್ಲಾ ಅವರ ಆಸೆಯಂತೆ, ನೆಹರೂ ಅವರು ಆ ರಾಜ್ಯಕ್ಕೆ ಹಲವು ರಿಯಾತಿಗಳು ದೊರೆಯುವಂತೆ ನೋಡಿಕೊಂಡರು. ಸಂವಿಧಾನದ 370 ವಿಧಿ, ನಂತರದಲ್ಲಿ 35 ಎ ಪರಿಚ್ಛೇದ ಮೊದಲಾದ ವಿಶೇಷಾಧಿಕಾರಗಳನ್ನು ಪಡೆದುಕೊಳ್ಳುವ ಮೂಲಕ, ಕಾಶ್ಮೀರವು ಭಾರತದಲ್ಲಿದ್ದುಕೊಂಡೂ ಪ್ರತ್ಯೇಕ ರಾಷ್ಟ್ರದ ಪರಿಕಲ್ಪನೆಯನ್ನು ರೂಢಿಸಿಕೊಂಡಿತು. ಭಾರತದ ಜನರನ್ನು ಬೇರೆ ದೇಶದ ಪ್ರಜೆಗಳನ್ನು ನೋಡುವ ಕಾಶ್ಮೀರದ ಚಾಳಿಗೆ, ನೆಹರೂ ಪೋಷಿತ ವಿಶೇಷ ಸ್ಥಾನಮಾನಗಳೇ ಪ್ರಮುಖ ಕಾರಣ.

1947ರಲ್ಲಿ ಪಾಕಿಸ್ತಾನದ ಆಕ್ರಮಣಕ್ಕೆ ಬೆದರಿ, ಭಾರತದೊಂದಿಗೆ ವಿಲೀನಗೊಂಡ ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನವನ್ನು ರೂಪಿಸಿಕೊಳ್ಳುವ ಅವಕಾಶವನ್ನು ನೀಡಿ, ಭಾರತ ಸರಕಾರ ಅತಿ ದೊಡ್ಡ 'ಬ್ಲಂಡರ್' ಮಾಡಿತೆಂದೇ ಹೇಳಬೇಕು. ಮೊನ್ನೆ ಮೊನ್ನೆಯ ತನಕವೂ, ಅಷ್ಟೇಕೆ ಇಂದೂ ಸಹ, 'ಕಾಶ್ಮೀರ ಪ್ರತ್ಯೇಕತಾವಾದಿ'ಗಳೆಂಬ ಪ್ರಮುಖ, ಪ್ರಭಾವಶಾಲಿ ಗುಂಪು ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಅಸ್ತಿತ್ವವನ್ನು ಬಿಂಬಿಸಲು ಯಶಸ್ವಿಯಾಗಿರುವುದು, ಸರಕಾರಗಳೊಂದಿಗೆ ಮಾತುಕತೆಯಾಡುವ ಸ್ಥಾನವನ್ನು ಪಡೆದಿರುವುದು ಈ ಒಂದು ವಿಶೇಷ ಸ್ಥಾನಮಾನದಿಂದಾಗಿಯೇ. ಜತೆಜತೆಯಲ್ಲೇ, 'ಆಜಾದ್ ಕಾಶ್ಮೀರ'ವೆಂಬ ಮತ್ತೊಂದು ಪರಿಕಲ್ಪನೆಯು, 'ಆಜಾದಿ' ಎಂಬ ಕನಸು ಕಾಶ್ಮೀರದ ಒಂದು ವರ್ಗದ ಜನತೆಯ ಮನದಾಳದಲ್ಲಿ ಮೂಡಿಬರಲು ಸಹ, ಭಾರತ ನೀಡಿದ ವಿಶೇಷ ಸ್ಥಾನಮಾನವೇ ಪ್ರಮುಖ ಕಾರಣ. ತಮ್ಮ ರಾಜ್ಯದ ರಕ್ಷಣೆಗಾಗಿ ಸೇನೆಯನ್ನು ವಿನಿಯೋಜಿಸುವುದು ಮತ್ತು ಅಭಿವೃದ್ಧಿ ಕೆಲಸಗಳಿಗೆ ಅಪಾರ ಪ್ರಮಾಣದ ಹಣವನ್ನು ನೀಡುವುದು ಮಾತ್ರ ಕೇಂದ್ರ ಸರಕಾರದ ಕೆಲಸ ಎಂದು ಅಲ್ಲಿನ ಜನರು, ರಾಜಕಾರಣಿಗಳು, ಅಧಿಕಾರಿಗಳು, ಯುವ ಜನರು (ತಪ್ಪಾಗಿ) ಅರ್ಥೈಸಿಕೊಳ್ಳಲು ಸಹ ಈ 'ವಿಶೇಷ ಸ್ಥಾನಮಾನ' ಕೊಡುಗೆ ನೀಡಿದೆ.

1947ರಲ್ಲಿ ಜಮ್ಮು ಮತ್ತು ಕಾಶ್ಮೀರದ ಪ್ರಧಾನಮಂತ್ರಿಯಾಗಿ ನಿಯೋಜನೆಗೊಂಡ ಶೇಖ್ ಅಬ್ದುಲ್ಲಾ, ಒಳಸಂಚು ಮಾಡಿ ಆಡಿದ ಆಟಗಳು ಹಲವು. ನೆರೆಯ ದೇಶ ಪಾಕಿಸ್ತಾನದೊಂದಿಗೆ ಕಾಶ್ಮೀರವನ್ನು ಧರ್ಮದ ಆಧಾರದ ಮೇಲೆ ವಿಲೀನಗೊಳಿಸಬೇಕೆಂಬ ಅವರ ಅದಮ್ಯ ಅಭಿಲಾಷೆಯನ್ನು ನೆರವೇರಿಸಲು ದೊಡ್ಡ ಪ್ರಮಾಣದ ಒಳಸಂಚು ನಡೆಸಿದ ಕುಖ್ಯಾತಿ ಅಬ್ದುಲ್ಲಾ ಅವರಿಗಿದೆ. ಅತ್ತ ಪಾಕಿಸ್ತಾನದವರು ಅಬ್ದುಲ್ಲಾ ಅವರನ್ನು 'ನೆಹರು ಏಜೆಂಟ್' ಎಂದು ಕರೆಯುವ ನಾಟಕವನ್ನು ಸಹಾ ಆಡಿದ್ದರು. ಶೇಖ್ ಅಬ್ದುಲ್ಲಾ ಅವರ ದೇಶದ್ರೋಹಿ ಚಟುವಟಿಕೆಗಳನ್ನು ಪತ್ತೆಹಚ್ಚಿ ವಿಚಾರಣೆಗೆ ಒಳಪಡಿಸಿದಾಗ, ಆರಂಭದಲ್ಲಿ ನೆಹರು, ಅಬ್ದುಲ್ಲಾ ಪರವಾಗಿ ವಾದಿಸಿದ್ದೂ ಉಂಟು. ಆದರೆ ಶೇಖ್ ಅಬ್ದುಲ್ಲಾ ನಡೆಸಿದ ಪಾಕಿಸ್ತಾನ ಪರವಾದ ಒಳಸಂಚು ಬಹಿರಂಗಗೊಂಡು ಬಲವಾದ ಪುರಾವೆ, ದೇಶದ್ರೋಹ ಕೆಲಸ , ಅವರು ಮತ್ತು ಅವರ ಸಂಗಾತಿಗಳು ಸಂಗ್ರಹಿಸಿದ್ದ ಶಸ್ತ್ರಾಸ್ತ್ರಗಳು ಪತ್ತೆಯಾದ ನಂತರ, ಶೇಖ್ ಅಬ್ದುಲ್ಲಾ ಅವರನ್ನು ಬಂಧಿಸಲು ನೆಹರೂ ಅವರೇ ನಿರ್ದೇಶನ ನೀಡಬೇಕಾಯಿತು. 'ಕಾಶ್ಮೀರ ಒಳಸಂಚು ಪ್ರಕರಣ' ಎಂಬ ಹೆಸರಿನಲ್ಲಿ ದೇಶದ ಗಮನವನ್ನು ಸೆಳೆದಿದ್ದ ಈ ಬೃಹತ್ ಒಳಸಂಚು, ದೀರ್ಘ ತನಿಖೆಗೆ ಒಳಗಾಗಿ, 1964 ರಲ್ಲಿ ಇನ್ನೇನು ತೀರ್ಪು ಹೊರಬೀಳಬೇಕು ಎನ್ನುವಷ್ಟರಲ್ಲಿ, ಕೇಂದ್ರ ಸರಕಾರವು ಪ್ರಕರಣವನ್ನು ಹಿಂಪಡೆದು ಇಡೀ ಪ್ರಕರಣವನ್ನು ಮುಚ್ಚಿಹಾಕಿತು. ಶೇಖ್ ಅಬ್ದುಲ್ಲಾ ಅವರು 11 ವರ್ಷ ಜೈಲಿನಲ್ಲಿದ್ದು, ಈ ಒಳಸಂಚಿನ ಪರಿಣಾಮವಾಗಿ ಶಿಕ್ಷೆ ಅನುಭವಿಸುತ್ತಾರೆಂಬ ಬಹುಜನರ ನಿರೀಕ್ಷೆಗೆ ಇದರಿಂದಾಗಿ ತಣ್ಣೀರು ಎರಚಿದಂತಾಯಿತು. ಈ ಪ್ರಕರಣವನ್ನು ವಾಪಸು ಪಡೆಯಲು 1964 ರಲ್ಲಿ ನಿರ್ಣಯ ಕೈಗೊಂಡವರು ಅಂದಿನ ಪ್ರಧಾನಿ ನೆಹರೂ.

ದೇಶದ್ರೋಹದ ಆಪಾದನೆ ಹೊತ್ತು, ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸಬೇಕೆಂಬ ಒಳಸಂಚು ನಡೆಸಿಯೂ, ಶಿಕ್ಷೆಗೆ ಒಳಗಾಗದೇ ಹೊರಬಂದ ಶೇಖ್ ಅಬ್ದುಲ್ಲಾ ಅವರ ಉದಾಹರಣೆಯು, ಕಾಶ್ಮೀರದ ಪ್ರತ್ಯೇಕತಾವಾದಿಗಳಿಗೆ ಬಹು ದೊಡ್ಡ ಸ್ಫೂರ್ತಿ. ಭಾರತದ ವಿರುದ್ಧ ಒಳಸಂಚು ನಡೆಸಿದರೂ, ಕೇಂದ್ರ ಸರಕಾರದ ಚುಕ್ಕಾಣಿ ಹಿಡಿದವರು ತಮ್ಮ ಪರವಾಗಿ ಸಹಾನುಭೂತಿಯಿಂದ ವರ್ತಿಸುತ್ತಾರೆ ಎಂಬ ಭರವಸೆ ಕಾಶ್ಮೀರದ ಪ್ರತ್ಯೇಕತಾವಾದಿಗಳಲ್ಲಿತ್ತು. ಅದಕ್ಕೆ ಪೂರಕವಾಗಿ ಸ್ವತಂತ್ರ ಭಾರತದಲ್ಲಿ ಬಹುಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವು ಪ್ರತ್ಯೇಕತಾವಾದಿಗಳಿಗೆ ವಿಶೇಶ ಸವಲತ್ತು ನೀಡಿ, ಮಣೆ ಹಾಕಿದ್ದರ ಜತೆ, 'ತಾತ್ಕಾಲಿಕ' ಎನಿಸಿದ್ದ 370ನೆಯ ವಿಧಿಯನ್ನು ಹಿಂಪಡೆಯುವ ಪ್ರಸ್ತಾಪವನ್ನೇ ಮಾಡಿರಲಿಲ್ಲ. ಬದಲಿಗೆ ಆ ವಿಧಿಯ ತಂಟೆಗೆ ಹೋದರೆ, ಕಾಶ್ಮೀರವೆಂಬ ಡೈನಮೈಟ್ ಸ್ಫೋಟಿಸುತ್ತದೆ ಎಂಬ ಅಭಿಪ್ರಾಯವನ್ನು ದೇಶದ ಎಲ್ಲೆಡೆ ಪಸರಿಸಿ, ಬೆಳೆಯಲು ಪೂರಕವಾಗಿ ಕೆಲಸಮಾಡಿತು.

ಭಾರತವು ಕಾಶ್ಮೀರಕ್ಕೆ ನೀಡಿದ ವಿಶೇಷ ಸ್ಥಾನಮಾನದ ದುರುಪಯೋಗ ನಿರಂತರವಾಗಿ ನಡೆದಿದೆ. ಅಂತಹ ದುರಪಯೋಗದ ಹಲವು ಕುಖ್ಯಾತ ಉದಾಹರಣೆಗಳಲ್ಲಿ, ಕಾಶ್ಮೀರ ಕಣಿವೆಯ 'ಎಥ್ನಿಕ್ ಕ್ಲೆನ್ಸಿಂಗ್' ಅಥವಾ 'ಜನಾಂಗ ಶುದ್ಧತೆ' ಎದ್ದು ಕಾಣುವಂತಹದ್ದು. 1990ರ ದಶಕದಲ್ಲಿ, ಶ್ರೀನಗರದ ಸುತ್ತ ಮುತ್ತ ಜಿಲ್ಲೆಗಳಲ್ಲಿ ಇದ್ದ ಹಿಂದೂ ಜನರನ್ನು ಬೆದರಿಸಿ, ಕೆಲವರನ್ನು ಸಾಯಿಸಿ ಮನೆ ಬಿಟ್ಟು ಓಡಿಸಿದ ಈ ಯಶಸ್ವೀ ಅಭಿಯಾನಕ್ಕೆ ಸ್ಥಳೀಯ ಸರಕಾರದ ಪರೋಕ್ಷ ಬೆಂಬಲವಿದ್ದುದರ ಜತೆ, 370ನೇ ವಿಧಿ ಒದಗಿಸಿದ ವಿಶೇಷಾಧಿಕಾರವೂ ಕಾರಣ. ಕಾಶ್ಮೀರೀ ಪಂಡಿತರ ಮೇಲೆ ಭಯೋತ್ಪಾದಕರು ಮತ್ತು ಶಸ್ತ್ರ ಹಿಡಿದ ಸ್ಥಳೀಯರು ನಿರಂತರವಾಗಿ, ತಿಂಗಳುಗಟ್ಟಲೆ ಬಂದೂಕು ದಾಳಿ ನಡೆಸಿ, ಹಲವರನ್ನು ಕೊಂದು, ಈ ಪ್ರದೇಶದಲ್ಲಿ ಮುಸ್ಲಿಮರು ಅಲ್ಲದವರಿಗೆ ಜಾಗವಿಲ್ಲ ಎಂದು ಬೆದರಿಸಿ, ಐದಾರು ಲಕ್ಷ ಕಾಶ್ಮೀರಿ ಹಿಂದೂಗಳು, ಹುಟ್ಟಿದ ಊರನ್ನು ತೊರೆದು, ದೆಹಲಿಯತ್ತ ನಿರಾಶ್ರಿತರಾಗಿ ಬಂದು ನೆಲೆಸಿದ ಘಟನೆಯು ಸ್ವತಂತ್ರ ಭಾರತದ ಅತ್ಯಂತ ದುರದೃಷ್ಟಕರ ವಿದ್ಯಮಾನಗಳಲ್ಲಿ ಒಂದು.

ಆದರೆ ಈ ಅಮಾನುಷ 'ಎಥ್ನಿಕ್ ಕ್ಲೆನ್ಸಿಂಗ್'ಗೆ ಸಹಕರಿಸಿದ, ಭಯೋತ್ಪಾದಕರಿಗೆ ಬೆಂಬಲ ನೀಡಿದ ಸ್ಥಳೀಯ ಜನರಿಗೆ ಶಿಕ್ಷೆಯಾದ ಪ್ರಕರಣಗಳು ವಿರಳ. ಏಕೆಂದರೆ, 370ನೇ ವಿಧಿಯ ಪ್ರಕಾರ ಕಾಶ್ಮೀರಕ್ಕೆ ನಿಡಿರುವ ವಿಶೇಷ ಸ್ಥಾನಮಾನದಿಂದಾಗಿ, ಅವರ ವಿರುದ್ಧ ಕ್ರಮ ಜರುಗಿಸಲು ಕೇಂದ್ರ ಸರಕಾರಕ್ಕೆ ತೊಡಕು.

'ನಾವು ಭಾರತವನ್ನು ಬಿಟ್ಟು, ಪ್ರತ್ಯೇಕ ರಾಷ್ಟ್ರವಾಗಿರುತ್ತೇವೆ' ಎಂದು ಬಹಿರಂಗವಾಗಿಯೇ ಸವಾಲು ಒಡ್ಡುತ್ತಾ, ಕಾಶ್ಮೀರದ ಶಾಂತಿಯನ್ನು ಕದಡುತ್ತಿರುವ 'ಪ್ರತ್ಯೇಕತಾವಾದಿಗಳು' ಎಂಬ ಒಂದು ವರ್ಗಕ್ಕೆ ಹಿಂದಿನ ಸರಕಾರಗಳು ಹಲವು ಸವಲತ್ತುಗಳನ್ನು ನೀಡಿವೆ! ಅವರಿಗೆ ವಿಶೇಷ ರಕ್ಷಣೆಯನ್ನೂ ನೀಡಿದ್ದು, ಕೆಲವು ಸಂದರ್ಭದಲ್ಲಿ ಅವರೊಂದಿಗೆ ಮಾತುಕತೆ ನಡೆಸಲೆಂದು ದೆಹಲಿಗೆ ಕರೆಸಿದಾಗ, ಅವರನ್ನು ವಿಐಪಿಗಳಂತೆ ನೋಡಿಕೊಂಡಿದೆ. ಇದೊಂದು ಆಯಾಮವಾದರೆ, ಕೇಂದ್ರ ಸರಕಾರವು ಕಾಶ್ಮೀರಕ್ಕೆ ನೀಡಿದ ಧನಸಹಾಯವನ್ನು ಅಲ್ಲಿನ ರಾಜಕೀಯ ಪಕ್ಷಗಳ ಮುಖಂಡರು ವ್ಯಾಪಕವಾಗಿ ದುರುಪಯೋಗಪಡಿಸಿಕೊಂಡರು; ಭಾರತದಿಂದ ಹರಿದುಬಂದ ಹಣದ ಹೊಳೆಯನ್ನು ಕುಡಿದು ತೇಗಿದರು, ಅಪಾರ ಧನ ಸಂಗ್ರಹಿಸಿದರು. ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳು, ರಾಜಕೀಯ ಪಟುಗಳು ಬಹು ವೆಚ್ಚದ ಸರಕಾರಿ ಬಂಗಲೆಗಳನ್ನು, ಅದರ ಉಸ್ತುವಾರಿ ವೆಚ್ಚವನ್ನು ಮತ್ತು ಇತರ ಸವಲತ್ತುಗಳನ್ನು ಇಂದಿಗೂ ಉಪಯೋಗಿಸಿಕೊಳ್ಳುತ್ತಿದ್ದಾರೆ!

ನೆರೆ ರಾಷ್ಟ್ರವಾದ ಪಾಕಿಸ್ತಾನವು ಭಯೋತ್ಪಾದನೆಯನ್ನು ಒಂದು ಪಾಲಿಸಿಯನ್ನಾಗಿ ತನ್ನ ಆಡಳಿತ ಯಂತ್ರದಲ್ಲಿ ಅಳವಡಿಸಿಕೊಂಡು, ಭಯೋತ್ಪಾದಕರನ್ನು ಮತ್ತು ಆಧುನಿಕ ಶಸ್ತ್ರಾಸ್ತ್ರಗಳನ್ನು ಕಾಶ್ಮೀರ ಕಣಿವೆಗೆ ಕಳೆದ ಹಲವು ದಶಕಗಳಿಂದ ನಿರಂತರವಾಗಿ ಕಳುಹಿಸುತ್ತಲೇ ಇದೆ. ಆ ಪ್ರಯತ್ನವನ್ನು ನಮ್ಮ ಸೇನೆಯು ನಿರಂತರವಾಗಿ ತಡೆಯುತ್ತಲೇ ಇದೆ. ಆದರೂ, ಸೇನೆಯ ಕಣ್ತಪ್ಪಿಸಿ, ಕಾಶ್ಮೀರವನ್ನು ಪ್ರವೇಶಿಸುವ ಹಲವು ಭಯೋತ್ಪಾದಕರನ್ನು ಸ್ಥಳೀಯರು ರಕ್ಷಿಸಿದ ಘಟನೆಗಳು ಸಹ ವರದಿಯಾಗುತ್ತವೆ. ಅಂತಹವರ ಅಪರಾಧ ಪುರಾವೆ ಸಹಿತ ಋಜುವಾತಾದರೂ, ಶಿಕ್ಷೆಗೆ ಒಳಪಡದೇ ತಪ್ಪಿಸಿಕೊಳ್ಳುವ ಅವಕಾಶ ಕಾಶ್ಮೀರದಲ್ಲಿದ್ದರೆ, ಅದಕ್ಕೆ ಒಂದು ಕಾರಣ ಆ ರಾಜ್ಯ ಪಡೆದಿದ್ದ ವಿಶೇಷ ಸ್ಥಾನಮಾನದ ದುರುಪಯೋಗ.

ಜಮ್ಮು-ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಪರಿಗಣಿಸುವ ಮೂಲಕ ರಾಜ್ಯದ ಸ್ಥಾನವನ್ನೇ ಕಿತ್ತುಕೊಂಡಿದ್ದು 'ಕಾಶ್ಮೀರಿ'ಗಳಿಗೆ ಆಘಾತವನ್ನು ನೀಡಿದ್ದಂತೂ ಸತ್ಯ. ಎಲ್ಲವೂ ಸಹಜಸ್ಥಿತಿಗೆ ಮರಳಿದ ನಂತರ ಜಮ್ಮು ಕಾಶ್ಮೀರ ರಾಜ್ಯವನ್ನು ರೂಪಿಸುವುದಾಗಿ ಕೇಂದ್ರ ಸರಕಾರ ಭರವಸೆ ನೀಡಿದ್ದರೂ, ಹೊಸ ರಾಜ್ಯದಲ್ಲಿ ಲಡಾಖ್ ಸೇರಿರುವುದಿಲ್ಲ ಎಂಬ ವಿಚಾರನ್ನೇ ಹಲವರಿಗೆ ಅರಗಿಸಿಕೊಳ್ಳಲು ಸಾಧ್ಯವಾಗದೇ ಇರಬಹುದು. ಕಳೆದ ಕೆಲವು ದಶಕಗಳಿಂದ ಭಾರತವನ್ನು ಮತ್ತು ಭಾರತ ಸರಕಾರದ ಯಾವುದೇ ನಡೆಯನ್ನು ವಿರೋಧಿಸಿಕೊಂಡೇ ಬರುವಂತೆ ಕಾಶ್ಮೀರದ ಒಂದು ವರ್ಗದ ಜನತೆಯ 'ಬ್ರೈನ್‌ವಾಶ್' ಆಗಿರುವುದರಿಂದ ತಮ್ಮ ರಾಜ್ಯವು ಎರಡು ಭಾಗವಾಗಿರುವ ಕಟು ಸತ್ಯ ಅವರಿಗೆ ಬರಸಿಡಿಲಿನಂತೆ ಕಾಡಬಹುದು.

ಕಾಶ್ಮೀರದ ವಿಚಾರ ಬಂದಾಗಲೆಲ್ಲಾ, ನಾನಾ ರೀತಿಯ ತೀಕ್ಷ್ಣ ಪ್ರತಿಕ್ರಿಯೆ ನೀಡುವ ಪಾಕಿಸ್ತಾನದ ವಿಚಾರವೂ ಇಲ್ಲಿ ತೀರಾ, ತೀರಾ ಪ್ರಸ್ತುತ. ಧರ್ಮದ ಆಧಾರದಲ್ಲಿ, ಜಮ್ಮು-ಕಾಶ್ಮೀರದ ಸಂಪೂರ್ಣ ಪ್ರದೇಶ ತನಗೆ ಸೇರಬೇಕೆಂಬ ವಿತಂಡವಾದವನ್ನು ಪಾಕಿಸ್ತಾನವು 1947ರಿಂದಲೂ ಮಾಡುತ್ತಿದೆ. ಕಾಶ್ಮೀರದ ಕಣಿವೆಯು ಸದಾಕಾಲ ಭಯೋತ್ಪಾದಕ ಚಟುವಟಿಕೆಗಳಲ್ಲಿ ಮುಳುಗಿರಬೇಕು ಎಂದು ಕಾರ್ಯಯೋಜನೆ ರೂಪಿಸಿರುವ ಪಾಕಿಸ್ತಾನ, ಅದಕ್ಕೆಂದೇ ಐಎಸ್‌ಐಯಂತಹ ಬಲಿಷ್ಠ ಮಿಲಿಟರಿ ವಿಭಾಗವನ್ನೇ ತೆರೆದಿದ್ದು, ಹಲವು ದಶಕಗಳಿಂದ ನಿರಂತರವಾಗಿ ವಿಧ್ವಂಸಕ ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತಾ ಬಂದಿರುವ ವಿಚಾರವು, ಒಂದು ರೀತಿಯಲ್ಲಿ ವಿಸ್ಮಯವನ್ನೂ ಇನ್ನೊಂದು ರೀತಿಯಲ್ಲಿ ಖೇದವನ್ನೂ ಹುಟ್ಟಿಸುತ್ತದೆ. ವಿಸ್ಮಯ ಏಕೆಂದರೆ, ನಮ್ಮ ಬಲಾಢ್ಯ ಸೇನೆಯ ಕಣ್ತಪ್ಪಿಸಿ, ಅಷ್ಟೊಂದು ಸಂಖ್ಯೆಯ ಭಯೋತ್ಪಾದಕರು ಕಳೆದ ಕೆಲವು ದಶಕಗಳಿಂದ ಭಾರತವನ್ನು ಪ್ರವೇಶಿಸಲು ಹೇಗೆ ಸಾಧ್ಯವಾಯಿತು? ಖೇದವೇಕೆಂದರೆ, 1990ರ ದಶಕದಲ್ಲಿ ಕಾಶ್ಮೀರದಲ್ಲಿ ನಡೆದ 'ಎಥ್ನಿಕ್ ಕ್ಲೆನ್ಸಿಂಗ್' ಎಂಬ ಕರಾಳ ಅಧ್ಯಾಯವೂ ಸೇರಿದಂತೆ, ಪಾಕಿಸ್ತಾನದ ಈ ಚಟುವಟಿಕೆಯ ಮೂಲಕ ಅಲ್ಲಿ ನಡೆದ ಜೀವ ಬಲಿ ಮತ್ತು ಸಂಸ್ಕೃತಿಯ ವಿನಾಶ.

ಸ್ವಿಟ್ಜರ್ಲೆಂಡ್‌ನಷ್ಟು ಸುಂದರ ಎಂದು ಹೆಸರುವಾಸಿಯಾಗಿದ್ದ ಕಾಶ್ಮೀರ ಭಯೋತ್ಪಾದಕರ ಅಡಗುದಾಣವಾಗಿ ಮಾರ್ಪಟ್ಟು, ಪ್ರವಾಸಿಗರ ಪಟ್ಟಿಯಿಂದ ಕೈತಪ್ಪಲು, ಪಾಕ್‌ನ ಈ ಕುತಂತ್ರ ಮುಖ್ಯಕಾರಣ. ಕಾಶ್ಮೀರದ ಮೇಲೆ (ಬಹುಸಂಖ್ಯಾತ ಹಿಂದುಗಳಿರುವ ಜಮ್ಮು ಮತ್ತು ಬಹುಸಂಖ್ಯಾತ ಬೌದ್ಧರಿರುವ ಲಡಾಖ್‌ಗಳನ್ನೂ ಸೇರಿಸಿಕೊಂಡು) ತನ್ನ ಹಕ್ಕನ್ನು ಪ್ರತಿಪಾದಿಸುತ್ತಿರುವ ಪಾಕ್, ಈಗಾಗಲೇ 'ಪಿಓಕೆ-ಪಾಕಿಸ್ತಾನ್ ಆಕ್ಯುಪಯ್ಡ್ ಕಾಶ್ಮೀರ್' ಎಂಬ ಕಾಶ್ಮೀರದ ಬೃಹತ್ ಭಾಗವನ್ನು ತನ್ನ ವಶದಲ್ಲಿಟ್ಟುಕೊಂಡು, ಅಲ್ಲಿ ಭಯೋತ್ಪಾದಕರ ಶಿಬಿರಗಳನ್ನು ನಡೆಸುತ್ತಿದೆ. ಅಧಿಕೃತವಾಗಿ, ಕಾನೂನುಬದ್ಧವಾಗಿ 1947ರಲ್ಲೇ ಭಾರತದಲ್ಲಿ ವಿಲೀನವಾಗಿರುವ ಕಾಶ್ಮೀರವನ್ನು 'ಐಓಕೆ-ಇಂಡಿಯನ್ ಆಕ್ಯುಪಯ್ಡ್ ಕಾಶ್ಮೀರ್' ಎಂದು ಕರೆಯುವ ಧಾರ್ಷ್ಟ್ಯವನ್ನು ಸಹ ಪಾಕ್ ರಾಜಕಾರಣಿಗಳು ಮತ್ತು ಪ್ರಧಾನಮಂತ್ರಿ ತೋರುತ್ತಿದ್ದಾರೆ!

ಈಗ ಕೇಂದ್ರ ಸರಕಾರವು ಕಾಶ್ಮೀರ ಮತ್ತು ಲಡಾಖ್‌ನ್ನು ಬಹಳಷ್ಟು ಅಭಿವೃದ್ಧಿ ಪಡಿಸಲು ನೀಲನಕ್ಷೆ ತಯಾರಿಸುತ್ತಿದೆ. ಹೊಸ ಉದ್ದಿಮೆಗಳನ್ನು, ಕೈಗಾರಿಕೆಗಳನ್ನು ಸ್ಥಾಪಿಸಿ, ಹೊಸ ಉದ್ಯೋಗಗಳನ್ನು ಸೃಷ್ಟಿಸಿ, ಅಲ್ಲಿನ ಜನಜೀವನದ ಮಟ್ಟವನ್ನು ಉತ್ತಮ ಪಡಿಸಲು ಯೋಚಿಸುತ್ತಿದೆ. ಅಲ್ಲಿ ಲಭ್ಯವಿರುವ ಪ್ರವಾಸೋದ್ಯಮದ ಪೊಟೆನ್ಶಿಯಲ್‌ನ್ನು ಉಪಯೋಗಿಸಿಕೊಂಡು, ವಿಶ್ವಮಟ್ಟದ ಪ್ರವಾಸಿ ಹಬ್ ಅಗಿ ಪರಿವರ್ತಿಸುವ ಮೂಲಕ, ಸ್ಥಳೀಯ ಜನರಿಗೆ ಉದ್ಯೋಗ ಒದಗಿಸುವ ಯೋಜನೆಯನ್ನು ಹಾಕಿಕೊಂಡಿದೆ. ಶಿಕ್ಷಣ, ಆರೋಗ್ಯ, ಸಂಪರ್ಕ, ಮೂಲಭೂತ ಸೌಕರ್ಯ-ಎಲ್ಲಾ ವಿಭಾಗಗಳಲ್ಲೂ ಕಾಶ್ಮೀರದ ಅಭಿವೃದ್ಧಿಗೆ ವಿಶೇಷ ಒತ್ತನ್ನು ನೀಡಲು ಪ್ರಯತ್ನಿಸುತ್ತಿದೆ.

ಆದರೆ, ಕಾಶ್ಮೀರವು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಭಾರತದ ಇತರ ರಾಜ್ಯಗಳಂತೆ ನಿಷ್ಪಕ್ಷಪಾತವಾಗಿ ಎಲ್ಲಾ ವರ್ಗದ ಜನರನ್ನೂ ಸ್ವೀಕರಿಸಿ, ಸಮಾನ ಸ್ಥಾನವನ್ನು ಪಡೆಯಬೇಕಾದರೆ, ಸ್ಥಳೀಯ ಜನರ ಮತ್ತು ರಾಜಕಾರಣಿಗಳ ಸಹಕಾರ ಬೇಕೇ ಬೇಕು. ಕಳೆದ ಕೆಲವು ದಶಕಗಳಿಂದ ಅಲ್ಲಿ ಬೇರು ಬಿಟ್ಟಿರುವ 'ಪ್ರತ್ಯೇಕತಾವಾದ' ಕ್ಯಾನ್ಸರ್‌ನಂತೆ ಕಾಶ್ಮೀರ ಕಣಿವೆಯಲ್ಲಿ ನಿಧಾನವಾಗಿ ಹರಡುತ್ತಿದೆ. ಕಾಶ್ಮೀರದ ಸಂಸ್ಕೃತಿಯ ಭಾಗ ಎನಿಸಿದ ಮೂಲ 'ಕಾಶ್ಮೀರಿಯತ್' ಇಂದು ಮಾಯವಾಗಿದೆ; ವಹಾಬಿ ಚಿಂತನೆಯ ಅಂಶಗಳನ್ನು ಮೈಗೂಡಿಸಿಕೊಂಡ, ವಿಶ್ವ ಮುಸ್ಲಿಂ ಬ್ರದರ್‌ಹುಡ್‌ನ ಪರಿಕಲ್ಪನೆಯನ್ನು ತಲೆಯಲ್ಲಿ ತುಂಬಿಕೊಂಡ ಒಂದು ಬಲಶಾಲಿ ವರ್ಗ ಸಕ್ರಿಯವಾಗಿದೆ. ಈ ರೀತಿಯ, 'ದೇಶ ವಿರೋಧಿ' ಎನಿಸಬಹುದಾದ ಚಟುವಟಿಕೆಗಳಿಗೆ ನೆರೆ ರಾಷ್ಟ್ರ ಬಹಿರಂಗವಾಗಿಯೇ ಬೆಂಬಲ ನೀಡುತ್ತಿದೆ. ಕಾಶ್ಮೀರವನ್ನು 'ಸ್ವತಂತ್ರ'ಗೊಳಿಸುವ ಬೀಜವನ್ನು ಬಿತ್ತಿ, ಕಾಶ್ಮೀರ ಕಣಿವೆಯ ಜನರನ್ನು ಹಿಂಸೆಗೆ ಪ್ರಚೋದಿಸಿ, ಭಾರತ ಸರಕಾರದ ವಿರುದ್ಧ ತಿರುಗಿಬೀಳುವಂತೆ ಪಾಕಿಸ್ತಾನ ಪ್ರೇರೇಪಿಸುತ್ತಿದೆ. ಮುಖ್ಯವಾಗಿ ಶ್ರೀನಗರ ಸುತ್ತಲಿನ ಕಣಿವೆಯ ಪ್ರದೇಶದ ನಾಲ್ಕೈದು ಜಿಲ್ಲೆಗಳಲ್ಲಿ ಭಾರತ ವಿರೋಧಿ ಚಿಂತನೆಯನ್ನು ಮೈಗೂಡಿಸಿಕೊಂಡು, ಬ್ರೈನ್ ವಾಶ್ ಆಗಿರುವ ಒಂದು ವರ್ಗವೇ ಜನ್ಮತಾಳಿ, ಬೆಳೆದಿದೆ.

ಮುಖ್ಯವಾಗಿ ಯುವಜನರನ್ನು ಒಳಗೊಂಡಿರುವ ಈ ವರ್ಗಕ್ಕೆ ಪಾಕ್, ನೇರವಾಗಿ ಮತ್ತು ಪರೋಕ್ಷವಾಗಿ ತರಬೇತಿ ನೀಡುತ್ತಿರುವ ವಿಚಾರ ರಹಸ್ಯವೇನಲ್ಲ. ಶಸ್ತ್ರಾಸ್ತ್ರ ಬಳಕೆಯೂ ಸೇರಿದಂತೆ, ಭಾರತದ ವಿರುದ್ಧ ಮತ್ತು ಭಾರತೀಯ ಸೇನೆಯ ವಿರುದ್ಧ ಸದಾಕಾಲ ಎದೆಯುಬ್ಬಿಸಿ ಹೋರಾಡಲು ನಿಲ್ಲಲು ತುದಿಗಾಲಲ್ಲಿರುವ ಈ ವರ್ಗಕ್ಕೆ ಬುರ್ಹಾನ್ ವಾನಿ, ಜಾಕಿರ್ ಮೂಸಾ ರಂತಹ ದಾರಿತಪ್ಪಿದ ಭಯೋತ್ಪಾದಕರೇ ಹೀರೋಗಳು. ಇವರ ಸಂಘಟನೆಗಳು ಸ್ಥಳೀಯ ಅಮಾಯಕ ಜನಸಾಮಾನ್ಯರನ್ನು ಒಂದೋ ದಾರಿ ತಪ್ಪಿಸುತ್ತಿದೆ ಅಥವಾ ಶಸ್ತ್ರಗಳ ಮೂಲಕ ಬೆದರಿಸುತ್ತಿದೆ. ಸಶಸ್ತ್ರ ಭಯೋತ್ಪಾದಕರನ್ನು ಸೇನೆಯು ಬಂಧಿಸಲು ಮುಂದಾದಾಗ, ನೂರಾರು ಸ್ಥಳೀಯರಿಗೆ ಕಲ್ಲು ಹೊಡೆಯುವಂತೆ ಪ್ರೇರೇಪಿಸಿ, ಭಯೋತ್ಪಾದಕರು ತಪ್ಪಿಸಿಕೊಳ್ಳುವ ಸಂಚು ಮಾಡುತ್ತಿರುವುದೇ ಈ ವರ್ಗ.

ಕಾಶ್ಮೀರದ ಸರ್ವತೋಮುಖ ಪ್ರಗತಿಯನ್ನು ಸಾಧಿಸಲು, ಕೇಂದ್ರ ಸರಕಾರ ಮುಂದಿನ ದಿನಗಳಲ್ಲಿ ಸಕ್ರಿಯವಾಗಿ ಕಾರ್ಯಕ್ಷೇತ್ರಕ್ಕೆ ಇಳಿದಾಗ, ಈ ಒಂದು ವರ್ಗ ತೀವ್ರವಾಗಿ ಪ್ರತಿರೋಧ ಒಡ್ಡುವ ಸಾಧ್ಯತೆ ಬಹಳ. ಕಾಶ್ಮೀರದಲ್ಲಿ ಹೊಸ ಉದ್ದಿಮೆಗಳನ್ನು, ವ್ಯಾಪಾರಗಳನ್ನು ಸ್ಥಾಪಿಸಿ, ಪ್ರವಾಸಿಗರ ಹಬ್ ಆಗಿ ಪರಿವರ್ತಿಸುವ ಕೇಂದ್ರ ಸರಕಾರದ ಆಶಯ ಯಶಸ್ವಿಯಾದರೆ, ಈ ಬ್ರೈನ್‌ವಾಶ್ ಆಗಿರುವ ವರ್ಗಕ್ಕೆ ಹಿನ್ನಡೆ ಉಂಟಾದಂತೆ. ಆ ಪ್ರಾಂತ್ಯವು ಭಾರತದ ಇತರ ಪ್ರದೇಶಗಳಂತೆ ಅಭಿವೃದ್ಧಿ ಹೊಂದಿ, ಸ್ವಾಭಾವಿಕ ಎನಿಸುವ ವಾತಾವರಣವನ್ನು ಪಡೆದು, ಯಾರು ಬೇಕಾದರೂ ಅಲ್ಲಿ ಹೊಸ ವ್ಯವಹಾರ ಸ್ಥಾಪಿಸುವ ಪ್ರಯತ್ನ ಮಾಡುವಂತಾದರೆ, ವಿಶ್ವ ಜನರೆಲ್ಲರೂ ಅಲ್ಲಿನ ನಿಸರ್ಗ ಸೌಂದರ್ಯ ಕಂಡು, ಅನುಭವಿಸಲು ಧೈರ್ಯವಾಗಿ ಬರುವಂತಾದರೆ, ಪಾಕಿಸ್ತಾನಕ್ಕೆ ತೀವ್ರ ಮುಖಭಂಗ ಎನಿಸುತ್ತದೆ. ಆದ್ದರಿಂದ, ಇನ್ನಷ್ಟು ಭಯೋತ್ಪಾದಕರನ್ನು ಕಳಿಸುವ ಮೂಲಕ, ದಾರಿತಪ್ಪಿದ ಸ್ಥಳೀಯ ಯುವಕರಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡಿ, ಇತರ ಬೆಂಬಲ ನೀಡಿ ಭಾರತ ಸರಕಾರದ ಸಕಾರಾತ್ಮಕ ಹೆಜ್ಜೆಗಳನ್ನು ವಿಫಲಗೊಳಿಸಲು ಪ್ರಯತ್ನಿಸುವ ಮೂಲಕ, ಕಾಶ್ಮೀರದಲ್ಲಿ ಸದಾ ಅಶಾಂತಿ ನೆಲಸುವಂತೆ ಪಾಕ್ ಪ್ರಯತ್ನಿಸುತ್ತದೆ. ಅಂತಹ ಒಂದು ದುಷ್ಟ ಕಾರಸ್ಥಾನಕ್ಕೆ ಬಲಿಯಾಗಬಹುದಾದ ಕಾಶ್ಮೀರ ಕಣಿವೆಯ ಒಂದು ಜನವರ್ಗ, ತಮ್ಮ 'ಹೋರಾಟ'ವನ್ನು ನಿರಂತರವಾಗಿ ಚಾಲ್ತಿಯಲ್ಲಿಟ್ಟರೆ, ಕೇಂದ್ರ ಸರಕಾರದ ಹೊಸ ಯೋಜನೆಗಳ ಜಾರಿಗೆ ಹಿನ್ನಡೆಯಾಗಬಹುದು.

ನಿಜ, ಸೇನೆಯನ್ನು ಬಳಸಿ, ಅಂತಹ ಪ್ರಗತಿ ವಿರೋಧಿ ಕಾರಸ್ಥಾನವನ್ನು ಮತ್ತು ಪ್ರತಿರೋಧವನ್ನು ಹಿಮ್ಮೆಟ್ಟಿಸಬಹುದು, ಬಗ್ಗುಬಡಿಯಬಹುದು. ಆದರೆ ಎಷ್ಟು ಕಾಲ? ಭದ್ರತೆ, ಶಾಂತಿ ಮತ್ತು ನೆಮ್ಮದಿಯ ವಾತಾವರಣ ಇದ್ದಾಗ ಮಾತ್ರ ಯಾವುದೇ ಪ್ರದೇಶದ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಅಂತಹ ಒಂದು ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಸ್ಥಳೀಯರ ವಿಶ್ವಾಸಗಳಿಸುವುದು ತೀರಾ ಅಗತ್ಯ. ಅಂತಹ ವಿಶ್ವಾಸವನ್ನು ಗಳಿಸಲು ಸಫಲವಾಗುತ್ತೇವೆಂಬ ಭರವಸೆಯನ್ನು ಕೇಂದ್ರ ಸರಕಾರ ಇಟ್ಟುಕೊಂಡಿದೆ. ಕಾಶ್ಮೀರ, ಜಮ್ಮು ಮತ್ತು ಲಡಾಖ್ ಪ್ರದೇಶಗಳು ಶಾಂತಿ ತುಂಬಿದ ದಿನಗಳನ್ನು ಕಂಡು, ಸರ್ವತೋಮುಖ ಬೆಳವಣಿಗೆ ಅಲ್ಲಿ ಆಗಲಿ ಎಂಬುದೇ ಭಾರತೀಯರ ಆಶಯ. ಹಾಗಾದಾಗ ಮಾತ್ರ 370ನೆಯ ವಿಧಿಯನ್ನು ರದ್ದುಪಡಿಸಿ, ಸದುದ್ದೇಶದಿಂದ ಆ ರಾಜ್ಯವನ್ನು ಹೋಳುಮಾಡಿದ ದಿಟ್ಟ ನಡೆ ಅರ್ಥಪೂರ್ಣ ಎನಿಸಿಕೊಳ್ಳುತ್ತದೆ.

ಬಾಹ್ಯಾಕಾಶ ಯೋಜನೆಗಳ ಪಿತಾಮಹನಿಗೆ ಶತಮಾನೋತ್ಸವ

ಸ್ಮರಣೆ

ಪ್ರೊ. ಶ್ರೀನಿವಾಸಮೂರ್ತಿ, ಸುಂಡ್ರಹಳ್ಳಿ

vveditoped@gmail.com

ಭಾರತ 1947ರಲ್ಲಿ ಸ್ವಾತಂತ್ರ್ಯ ಪಡೆದಾಗ, ಅದೇ ತಾನೇ ಎಳೆಗೂಸಿನಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಅಂಬೆಗಾಲಿಡಲಾರಂಭಿಸಿತ್ತು. ಯಾವ ಕ್ಷೇತ್ರದಲ್ಲಿಯೂ ಸಹ ಗಮನಾರ್ಹ ಅಭಿವೃದ್ಧಿ ಸಾಧಿಸಿರಲಿಲ್ಲ. ಆಹಾರ, ಭದ್ರತೆ, ಶಿಕ್ಷಣ ಮತ್ತು ತಂತ್ರಜ್ಞಾನ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ, ಆಂತರಿಕವಾಗಿ ಮತ್ತು ಬಾಹ್ಯವಾಗಿ ಹತ್ತು ಹಲವು ಸವಾಲುಗಳು ಮತ್ತು ಸಮಸ್ಯೆಗಳಿದ್ದವು. ತುತ್ತಿನ ಚೀಲ ತುಂಬಿಸಿಕೊಳ್ಳುವುದೇ ಕಷ್ಟ ಇಂತಹ ಸಂದರ್ಭದಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಬಗ್ಗೆ ಯೋಚಿಸಲಿಕ್ಕೂ ಸಾಧ್ಯವಿಲ್ಲ ಎಂಬಂತಹ ಪರಿಸ್ಥಿತಿ ಇತ್ತು. ಆದರೆ ನಡೆದದ್ದೇ ಬೇರೆ.

ಅಹಮದಾಬಾದಿನಲ್ಲಿ 1919 ಆಗಸ್ಟ್ 12 ರಂದು ಜನಿಸಿದ್ದ ಹುಡುಗನೊಬ್ಬ ತನ್ನ 20 ನೇ ವಯಸ್ಸಿಗೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ ಪ್ರಕೃತಿ ವಿಜ್ಞಾನದಲ್ಲಿ ಟ್ರೈಪಾಸ್ (ಸ್ನಾತಕೋತ್ತರ ಪದವಿಗಾಗಿ ಪಡೆಯಬೇಕಾದ ಅರ್ಹತಾ ಪರೀಕ್ಷೆ) ಎಂಬ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಸ್ನಾತಕೋತ್ತರ ಪದವಿಯನ್ನು ಪೂರೈಸಿ, ಅದೇ ವಿಶ್ವವಿದ್ಯಾಲಯದಿಂದ 1947 ರಲ್ಲಿ ಪಿಎಚ್‌ಡಿ ಪದವಿಯನ್ನೂ ಸಹ ಪಡೆದು ಭಾರತಕ್ಕೆ ಹಿಂದಿರುಗಿದ್ದ. ವಿಜ್ಞಾನವೆಂದರೆ ಅಗಾಧವಾದ ಒಲವನ್ನು ಹೊಂದಿದ್ದ. ಹಾಗಾಗಿ ಅಲ್ಲಿಂದ ಹಿಂದಿರುಗಿದವರೇ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿ ಸರ್ ಸಿ.ವಿ ರಾಮನ್‌ರೊಂದಿಗೆ ಸಂಶೋಧನೆಯಲ್ಲಿ ನಿರತರಾದರು. ಆಗ ಅವರು ಮಾಡಿದ ಶೋಧಗಳು, ಈಗಿನ ಭಾರತದ ಬಾಹ್ಯಾಕಾಶ ಸಂಶೋಧನೆಗಳಿಗೆ ಕಾರಣವಾಯಿತು ಎಂದರೆ ತಪ್ಪಾಗಲಾರದು. ಅವರೇ ವಿಕ್ರಂ ಅಂಬಾಲಾಲ್ ಸಾರಾಭಾಯಿ. ವಿದೇಶದಲ್ಲಿ ಶಿಕ್ಷಣ ಮುಗಿಸಿ ಭಾರತಕ್ಕೆ ಹಿಂದಿರುಗುತ್ತಿದ್ದಂತೆ 1947 ರಲ್ಲಿ ಕಾಸ್ಮಿಕ್ ಸಂಶೋಧನೆಗೆ ಆರಂಭಿಕವಾಗಿ ನೆರವಾಗಬಲ್ಲ ಫಿಸಿಕಲ್ ರಿಸರ್ಚ್ ಲ್ಯಾಬೋರೇಟರಿ (ಪಿಆರ್‌ಎಲ್) ಎಂಬ ವಿಜ್ಞಾನ ಸಂಶೋಧನಾ ಸಂಸ್ಥೆಯನ್ನು ಹುಟ್ಟುಹಾಕಿದರು. ಈ ಸಂಸ್ಥೆಯೇ ಆ ನಂತರದ ಭಾರತದ ಬಾಹ್ಯಾಕಾಶ ಯೋಜನೆಗಳಿಗೆ ಮುನ್ನುಡಿ ಬರೆಯಿತು. 1962 ರಲ್ಲಿ ಮುಂಬೈನಲ್ಲಿ ಇಂಡಿಯನ್ ಕಮಿಟಿ ಫಾರ್ ಸ್ಪೇಸ್ ರಿಸರ್ಚ್ (ಇನ್ಕೋಸ್ಪಾರ್) ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ನಂತರದ ವರ್ಷಗಳಲ್ಲಿ ಅಂದರೆ 1969 ರಲ್ಲಿ ಇದೇ, ಇಂಡಿಯನ್ ಸ್ಯಾಟಲೈಟ್ ರಿಸರ್ಚ್ ಆರ್ಗನೈಸೇಷನ್ (ಇಸ್ರೋ) ಆಗಿ ಮರು ನಾಮಕರಣಗೊಂಡಿತು. ವಿಕ್ರಂ ಸಾರಾಭಾಯಿಯವರು ಶ್ರೀಮಂತ ಮತ್ತು ಕೈಗಾರಿಕಾ ಹಿನ್ನೆಲೆಯ ಕುಟುಂಬದಲ್ಲಿ ಜನಿಸಿದವರಾದ್ದರಿಂದ ಕೇವಲ ಬಾಹ್ಯಾಕಾಶ ಕ್ಷೇತ್ರದಲ್ಲಿ ಮಾತ್ರ ಆಸಕ್ತಿ ಹೊಂದಿದವರಾಗಿರಲಿಲ್ಲ. ಪರಮಾಣು ಶಕ್ತಿ, ಜವಳಿ ಉದ್ಯಮ, ಆಡಳಿತ ನಿರ್ವಹಣೆ, ಔಷಧೋದ್ಯಮ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿದರು.

1966 ರಲ್ಲಿ ಅಣುಶಕ್ತಿ ಆಯೋಗದ ಅಧ್ಯಕ್ಷರಾಗಿದ್ದ ಹೋಮಿ ಜಹಾಂಗೀರ್ ಭಾಭಾ ನಿಧನ ಹೊಂದಿದಾಗ ಆ ಸ್ಥಾನಕ್ಕೆ ಸಾರಾಬಾಯಿಯವರು ನೇಮಕಗೊಂಡರು. 1955 ರಲ್ಲಿ ಕಾಶ್ಮೀರದ ಗುಲ್ಮಾರ್ಗ್‌ನಲ್ಲಿ ವಿಶ್ವಕಿರಣಗಳ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದರು. ಇವರು ಸ್ಥಾಪಿಸಿದ ಇತರೆ ಸಂಸ್ಥೆಗಳು ಗ್ರೂಪ್ ಫಾರ್ ಇಂಪ್ರೂವ್‌ಮೆಂಟ್ ಆಫ್ ಸೈನ್ಸ್ ಎಜುಕೇಷನ್, ನೆಹರೂ ಫೌಂಡೇಶನ್, ಕಮ್ಯೂನಿಟಿ ಸೈನ್ಸ್ ಸೆಂಟರ್, ಅಹಮದಾಬಾದ್‌ನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಮ್‌ಎ), ಅಹಮದಾಬಾದ್‌ನಲ್ಲಿ 1966 ರಲ್ಲಿ ಸಮುದಾಯ ವಿಜ್ಞಾನ ಕೇಂದ್ರ, ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ. ಪ್ರಸಿದ್ಧ ಒಡಿಸ್ಸಿ ನೃತ್ಯಾಂಗನೆ ಮೃಣಾಲಿನಿಯವರನ್ನು ವಿವಾಹ ಮಾಡಿಕೊಂಡ ವಿಕ್ರಮ್ ಭಾರತೀಯ ಶಾಸ್ತ್ರೀಯ ನೃತ್ಯ-ಸಂಗೀತಗಳಲ್ಲಿ ಉತ್ತಮ ಅಭಿರುಚಿ ಹೊಂದಿದವರಾಗಿದ್ದರು. 'ದರ್ಪಣ ಅಕಾಡೆಮಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್' ಎಂಬ ಸಂಸ್ಥೆಯನ್ನು ಅವರು ಮೃಣಾಲಿನಿ ಅವರ ಸಾರಥ್ಯದಲ್ಲಿ ಹುಟ್ಟುಹಾಕಿದರು. ವಿಜೃಂಭಣೆಯ ಅಂತಾರಾಷ್ಟ್ರೀಯ ಕಲಾ ಉತ್ಸವಗಳನ್ನು ಏರ್ಪಡಿಸುವದೇ ಅಲ್ಲದೆ ಸಾಮಾಜಿಕ ಸಮಕಾಲೀನ ಸಮಸ್ಯೆಗಳಾದ ಭ್ರಷಾಚಾರ, ಅಸಹಿಷ್ಣುತೆ, ಸಾಮುದಾಯಿಕ ಆರೋಗ್ಯ, ಮಾನವ ಹಕ್ಕು, ಕೋಮು ಗಲಭೆ, ಧಾರ್ಮಿಕ ಸಂಘರ್ಷ ಮೊದಲಾದವುಗಳನ್ನು ನೃತ್ಯದ ವಸ್ತು ವಿಷಯಗಳನ್ನಾಗಿಸಿಕೊಂಡು ಜನಸಮುದಾಯವನ್ನು ತಲುಪುವ ಕಾರಣಕ್ಕೂ ದರ್ಪಣ ವಿಖ್ಯಾತಿ ಪಡೆದಿದೆ. ಪ್ರಸ್ತುತ ಸಾರಾಭಾಯ್ ದಂಪತಿಯ ಪುತ್ರಿ, ಸ್ವತಃ ಒಬ್ಬ ಶ್ರೇಷ್ಠ ನೃತ್ಯಾಂಗನೆ, ಕಲಾವಿದೆ ಮಲ್ಲಿಕಾ ಸಾರಾಭಾಯ್ ಇದನ್ನು ಮುನ್ನಡೆಸುತ್ತಿದ್ದಾರೆ. ಕಲ್ಪಕಂನಲ್ಲಿ 'ಫಾಸ್ಟರ್ ಬ್ರೀಡರ್ ಟೆಸ್ಟ್ ರಿಯಾಕ್ಟರ್ (ಎಫ್‌ಬಿಟಿಆರ್), ಹೈದರಾಬಾದ್‌ನಲ್ಲಿ ಎಲೆಕ್ಟ್ರಾನಿಕ್ಸ್ ಕೋ ಆಪರೇಶನ್ ಆಫ್ ಇಂಡಿಯಾ ಲಿಮಿಟೆಡ್ (ಇಸಿಐಎಲ್) ಮತ್ತು ಜುನಾಗಡದಲ್ಲಿ ಯುರೇನಿಯಂ ಕೋ ಆಪರೇಶನ್ ಆಫ್ ಇಂಡಿಯಾ ಲಿಮಿಟೆಡ್ (ಯುಸಿಐಎಲ್) ಕೂಡ ವಿಕ್ರಮ್ ಅವರ ಕೊಡುಗೆಗಳು.

ಗಾಂಧೀಜಿ ಪಠಿಸುತ್ತಿದ್ದ ಸ್ವದೇಶಿ ಮಂತ್ರದಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದ ಸಾರಾಭಾಯಿಯವರುಯಾವುದೇ ವೈಜ್ಞಾನಿಕ ಸಂಶೋಧನೆ ಜನರಿಗೆ ನೆರವಾಗುವ ಉದ್ಯಮಗಳನ್ನು ಸ್ಥಾಪಿಸುವಲ್ಲಿ ಸಫಲತೆಯನ್ನು ಪಡೆಯಬೇಕು. ಕೇಂದ್ರದ ಕೇವಲ ನಾಲ್ಕು ಗೋಡೆಗಳ ನಡುವೆ ನಡೆಯುವ ಬೌದ್ಧಿಕ ಕಸರತ್ತಾಗಬಾರದು ಎಂಬ ದೂರದೃಷ್ಟಿಯವರಾಗಿದ್ದರು. 'ಸಾರಾಭಾಯಿ ಕೆಮಿಕಲ್ಸ್, ಸಾರಾಭಾಯಿ ಗ್ಲಾಸ್, ಸಾರಾಭಾಯಿ ಗೀಗೀ ನಿಯಮಿತ, ಸಾರಾಭಾಯಿ ಮರ್ಕ್ ನಿಯಮಿತ, ಸಾರಾಭಾಯಿ ಎಂಜಿನಿಯರಿಂಗ್ ಗ್ರೂಪ್' ಮುಂತಾಗಿ ಅವರು ಹುಟ್ಟುಹಾಕಿದ ಸಂಸ್ಥೆಗಳೇ ಇದಕ್ಕೆ ನಿದರ್ಶನ. ಎಣ್ಣೆ ಕಾಳುಗಳಿಂದ ಎಣ್ಣೆ ತೆಗೆದು ಅದನ್ನು ಸಂಸ್ಕರಿಸಿ ಲಭ್ಯವಾದ ರಾಸಾಯನಿಕದಿಂದ ಸುಗಂಧ ದ್ರವ್ಯಗಳನ್ನು ತಯಾರಿಸುವುದು ಸ್ವದೇಶೀಯವಾಗಿ ಆಗ ಸಾಧ್ಯವಾಯಿತು. ಉತ್ತಮ ಗುಣಮಟ್ಟದ ಸಾಬೂನು ದೇಶೀಯವಾಗಿ ಉತ್ಪಾದನೆಯಾಯಿತು. ಅಮೂಲ್ಯವಾದ ವಿದೇಶೀ ವಿನಿಮಯ ಖರ್ಚು ಮಾಡಿ, ಹೆಚ್ಚು ಹಣ ತೆತ್ತು ಪೆನ್ಸಿಲಿನ್ ಔಷಧವನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಅವರು 'ಸ್ಟ್ಯಾಂಡರ್ಡ್ ಫಾರ್ಮಾಸ್ಯೂಟಿಕಲ್ಸ್ ಸಂಸ್ಥೆ'ಯನ್ನು ರೂಪಿಸಿ ದೇಶೀಯವಾಗಿ ಪೆನ್ಸಿಲಿನ್ ಉತ್ಪಾದನೆಗೆ ಪ್ರೋತ್ಸಾಹಿಸಿದರು.

ಡಾ. ಹೋಮಿ ಜಹಾಂಗೀರ್ ಭಾಭಾರ ಪ್ರೋತ್ಸಾಹದಿಂದ ತಿರುವನಂತಪುರಂನಲ್ಲಿ ರಾಕೆಟ್ ಉಡ್ಡಯನಾ ಕೇಂದ್ರವನ್ನು ಸ್ಥಾಪಿಸಿದರು. ಈ ಮುಂಚೆ ದೇಶೀಯ ಉಪಗ್ರಹಗಳನ್ನು ನಿರ್ದಿಷ್ಟ ಕಕ್ಷೆಯಲ್ಲಿ ಹಾರಿಸಲು ಬೇರೆ ದೇಶದವರ ಸಹಾಯ ಪಡೆಯಬೇಕಾಗಿತ್ತು. ಬದಲಿಗೆ ನಾವೇ ಅಂತಹ ರಾಕೆಟ್‌ನ್ನು ಯಾಕೆ ತಯಾರಿಸಬಾರದು ಎಂಬ ಪ್ರಶ್ನೆಯನ್ನು ಹಾಕಿಕೊಂಡು ಆ ಕನಸು ಈಡೇರುವ ಮುನ್ನವೇ ಸಾರಾಭಾಯಿ ಇಹ ಲೋಕ ತ್ಯಜಿಸಿದರು. ನಂತರ ಸತೀಶ್ ಧವನ್ ಮತ್ತು ಕಲಾಂ ಇಬ್ಬರೂ ಸೇರಿ ಇದನ್ನು ಈಡೇರಿಸಿದರು. ಇದೇ ಎಸ್‌ಎಲ್‌ವಿ ಯೋಜನೆ.

ರಷ್ಯಾ 1959 ರಲ್ಲಿ ಉಡಾಯಿಸಿದ 'ಸ್ಪುಟ್ನಿಕ್ 1' ಭಾರತದ ಬಾಹ್ಯಾಕಾಶ ಯೋಜನೆಗಳಿಗೆ ಸ್ಫೂರ್ತಿದಾಯಕ ಮಾದರಿಯಾಗಿತ್ತು. ಆರಂಭಿಕ ನೇತೃತ್ವ ವಹಿಸಿದ್ದ ಸಾರಾಭಾಯಿ ಅಮೆರಿಕಾದ ನಾಸಾದೊಂದಿಗೆ ಒಡಂಬಡಿಕೆ ಮಾಡಿಕೊಂಡು 1975 ರಲ್ಲಿ ಸ್ಯಾಟಲೈಟ್ ಇನ್‌ಸ್ಟ್ರಕ್ಷನಲ್ ಟೆಲಿವಿಷನ್ ಎಕ್ಸ್‌ಪೆರಿಮೆಂಟ್ (ಸೈಟ್) ಯೋಜನೆಯನ್ನು ಆರಂಭಿಸಿದರು. ಇದರ ಪರಿಣಾಮವಾಗಿ ಉಪಗ್ರಹ ಆಧಾರಿತ ಟೆಲಿವಿಷನ್ ಕಾರ್ಯಕ್ರಮಗಳನ್ನು ಸಮುದಾಯ ಅಭಿವೃದ್ಧಿ ಕಾರ್ಯಕ್ಕೆ ಬಳಸಲು ಸಾಧ್ಯವಾಯಿತು ಮತ್ತು ಈ ಯೋಜನೆ ಭಾರತದ ಆರು ರಾಜ್ಯಗಳಲ್ಲಿ ಅನುಷ್ಠಾನಗೊಂಡಿತು.

1970 ರಲ್ಲಿ ವಿಯೆನ್ನಾದಲ್ಲಿ ನಡೆದ ಐ.ಎ.ಇ.ಎ ಸಾಮಾನ್ಯ ಸಮ್ಮೇಳನದ ಅಧ್ಯಕ್ಷತೆ ಹಾಗೂ 1971ರಲ್ಲಿ 'ಶಾಂತಿ ಉದ್ದೇಶಗಳಿಗಾಗಿ ಅಣುಶಕ್ತಿ' ಎಂಬ ಧ್ಯೇಯದ ಮೇಲಿನ ವಿಶ್ವಸಂಸ್ಥೆಯ ನಾಲ್ಕನೇ ಸಮ್ಮೇಳನದ ಉಪಾಧ್ಯಕ್ಷರಾಗುವ ಮೂಲಕ ಭಾರತದ ಘನತೆಯನ್ನು ಹೆಚ್ಚಿಸಿದವರು, ವಿಕ್ರಂ ಸಾರಾಭಾಯ್. ಭಾರತ ಇಂದು ಚಂದ್ರಯಾನದಂತಹ ಬೃಹತ್ ಯೋಜನೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ ಎಂದರೆ ಅದಕ್ಕೆ ಮೂಲ ಕಾರಣ ಅಂದು ವಿಕ್ರಂ ಸಾರಾಭಾಯಿಯವರು ಹಾಕಿಕೊಟ್ಟ ಭದ್ರ ಅಡಿಪಾಯ. ಕೇವಲ 52 ವಯಸ್ಸಿನಲ್ಲಿ,1971 ರ ಡಿಸೆಂಬರ್ 30 ರಂದು ವಿಕ್ರಂ ಸಾರಾಭಾಯ್ ನಿಧನ ಹೊಂದಿದರು. ಅವರ ಸ್ಮರಣಾರ್ಥವಾಗಿ ತಿರುವನಂತಪುರದಲ್ಲಿ 1962 ರಲ್ಲಿ ಸ್ಥಾಪಿಸಿದ್ದ ಉಪಗ್ರಹ ಉಡ್ಡಯನ ಕೇಂದ್ರವಾದ ಥುಂಬಾ ಈಕ್ವೆಟೋರಿಯಲ್ ರಾಕೆಟ್ ಲಾಂಚಿಂಗ್ ಸ್ಟೇಷನ್‌ಗೆ, ವಿಕ್ರಂ ಸಾರಾಭಾಯಿ ಬಾಹ್ಯಾಕಾಶ ಕೇಂದ್ರ ಎಂದು ಮರು ನಾಮಕರಣ ಮಾಡಲಾಗಿದೆ. 1962 ರಲ್ಲಿ ಭಾರತ ಸರಕಾರದ ಭಟ್ನಾಗರ್ ಸ್ಮಾರಕ ಪಾರಿತೋಷಕ, 1966ರಲ್ಲಿ ಪದ್ಮಭೂಷಣ, 1972 ರಲ್ಲಿ ಮರಣೋತ್ತರವಾಗಿ ಪದ್ಮವಿಭೂಷಣ ಪ್ರಶಸ್ತಿಗಳಿಗೆ ಭಾಜನರಾದ ಈ ಮೇರು ವಿಜ್ಞಾನಿಯ ಜನ್ಮಶತಮಾನೋತ್ಸವ ವರ್ಷ ಇದು.